**<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ., ನ್ಯಾಯಾಲಯ.</u>**

**<u>ಹಿರೇಕೆರೂರು.</u>**

**<u>ಸಿ.ಸಿ.ನಂಬರ್ಃ200/2020</u>**

ಸಿಡಬ್ಲ್ಯೂಃ1

ಪಿಡಬ್ಲ್ಯೂಃ1

| | | |
|---|---|---|
| ಸಾಕ್ಷಿಯ ಹೆಸರು | : | ಪೂರ್ಣಿಮಾ ಲಮಾಣಿ |
| ಗಂಡನ ಹೆಸರು | : | ಪ್ರಕಾಶ |
| ವಯಸ್ಸು | : | 26 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಬಾವಾಪುರ |

ಇಂದು ದಿನಾಂಕಃ17.02.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**<u>ಮುಖ್ಯ ವಿಚಾರಣೆಃ</u>** ಮಾನ್ಯ ಎಪಿಪಿಯವರಿಂದಃ

ಆರೋಪಿತರ ಪರಿಚಯ ನನಗೆ ಇರುತ್ತದೆ. ದಿನಾಂಕ 06-07-2019 ರಂದು ಬೆಳಿಗ್ಗೆ 9.30 ಗಂಟೆಯ ಸಮಯಕ್ಕೆ ನಾನು ಮತ್ತು ಚಾಸಾ-4 ರವರು ಹೊಲದ ಕೆಲಸಕ್ಕಾಗಿ ಹೋಗಿದ್ದು ನಮ್ಮ ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿತರು ಬಂದು ನಮ್ಮನ್ನು ಅಡ್ಡಗಟ್ಟಿ ಇದು ನಮ್ಮ ಹೊಲ ನೀವು ಯಾಕೆ ಕೆಲಸ ಮಾಡುತ್ತಿದ್ದೀರಾ ಮಿಂಡ್ರೇರಾ ಬೋಸುಡೇರ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು, ಕೈಯಿಂದ ಹೊಡೆದು, ನಮ್ಮನ್ನು ಕೆಳಗೆ ನೆಲಕ್ಕೆ ಬೀಳಿಸಿ ಕಾಲಿನಿಂದ ಒದ್ದು, 1 ಮತ್ತು 2 ನೇ ಆರೋಪಿನೇದವರು ಸೀರೆ ಎಳೆದು ಕೆಳಗೆ ಬೀಳಿಸಿ ನಮಗೆ ಅವಮಾನ ಮಾಡಿರುತ್ತಾರೆ. ನಂತರ ಆರೋಪಿರು ನಮ್ಮನ್ನು ಅವಾಚ್ಯ ಶಬ್ದಗಳಿಂದ ಬೈಯ್ದು ನಮ್ಮನ್ನು ಉದ್ದೇಶಿಸಿ ನಿಮ್ಮನ್ನು ಸಾಯಿಸಿ ಬಿಡುತ್ತೇವ ಎಂದು ಜೀವ ಬೆದರಿಕೆಯನ್ನು ಹಾಕಿರುತ್ತಾರೆ. ನಂತರ ಚಾಸಾ-2, 5 ಮತ್ತು 6 ರವರನ್ನು ಗಲಾಟೆಯನ್ನು ಬಿಡಿಸಿರುತಾರೆ. ನಂತರ ಈ ಬಗ್ಗೆ ನಾವು ಊರಿನವರಿಗೆ ಹೇಳಿ ದೂರನ್ನು ದಾಖಲಿಸಿರುತೇವೆ. ಸಾಕ್ಷಿಯು ಸದರಿ ದಾಖಲೆಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದುಅದನ್ನು ನಿಪಿ1 ಎಂದುಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು.

2. ನಂತರ ಪೋಲಿಸರು ದಿನಾಂಕ 08-7-2019 ರಂದು ಘಟನಾ ಸ್ಥಳಕ್ಕೆ ಬೇಟಿ ನೀಡಿ ನಾನು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮದಲ್ಲಿ ಪಂಚನಾಮೆಯನ್ನು ಮಾಡಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದ ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಂತರ

ಪೋಲಿಸರಿಗೆ ನಾನು ಯಾವುದೇ ಮರುಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ 1 ರಿಂದ 3 ಮತ್ತು 7 ರವರನ್ನು ನೋಡಿ ಗುರುತಿಸಿದ್ದು, ಗೈರು ಹಾಜರು ಇರುವಂತಹ ಆರೋಪಿತರನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ಹೇಳಿದ ಮೇರೆಗೆ ಆರೋಪಿತರ ಗುರುತಿಸುವಿಕೆಯನ್ನು ಕೈಬಿಡಲಾಯಿತು.

**<u>ಪಾಟೀ ಸವಾಲುಃ</u>** ಆರೋಪಿ ಪರ ಶ್ರೀ ಎನ್ ವಿ ಪಿ ವಕೀಲರಿಂದಃ

ನಾನು ಟಿ ಸಿ ಹೆಚ್ ನ್ನು ಮಾಡಿರುತ್ತೇನೆ. ನಾನು ಯಾವುದೇ ನೌಕರಿ ಮಾಡುತ್ತಿಲ್ಲ. ನನ್ನ ಗಂಡನ ತಂದೆಯ ಹೆಸರು ಲೇಮಪ್ಪ ಎಂದು ಸಾಕ್ಷಿಗೆ ಸೂಚಿಸಿದ್ದು ಸದರಿ ಸೂಚನೆಗೆ ಈ ಪ್ರಕರಣದ ವಸ್ತು ಸ್ಥಿತಿಗೆ ಅಸಂಬದ್ಧವಾಗಿರುತ್ತದೆ. ಆ ಕಾರಣದಿಂದ ಸದರಿ ಸೂಚನೆಯನ್ನು ತಿರಸ್ಕರಿಸಲಾಗಿರುತ್ತದೆ. ಸದರಿ ಲೇಮಪ್ಪ ಹಾಗೂ 3 ನೇ ಆರೋಪಿಯ ನಡುವೆ ಸಿವಿಲ್ ವ್ಯಾಜ್ಯ ಇದಿದ್ದು , ಸದರಿ ಸಿವಿಲ್ ವ್ಯಾಜ್ಯ 3 ನೇ ಆರೋಪಿಯ ಪರವಾಗಿ ಡಿಕ್ರಿ ಆಗಿದ್ದು ಅವರ ಆಸ್ತಿಗೆ ತೊಂದರೆ ಮಾಡಬಾರದು ಎಂದು ಆದೇಶವಾಗಿರುತ್ತದೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಿವಾದಿತ ಆಸ್ತಿಗೆ ಸಂಬಂದಪಟ್ಟಂತೆ ನನ್ನ ಗಂಡ ಮತ್ತು ಮಾವ ಹಾಗೂ ಆರೋಪಿತರ ನಡುವೆ ಸಿವಿಲ್ ವ್ಯಾಜಗಳ ಸಲುವಾಗಿ ಗಲಾಟೆಗಳು ನಡೆದಿರುತ್ತವೆ ಎಂದರೆ ಆ ಬಗ್ಗೆ ನನಗೆ ಗೊತ್ತಿರುತ್ತದೆ.

2. ಚಾಸಾ-5 ಮತ್ತು 6 ರವರು ನನ್ನ ಸಂಬಂದಿಕರು. ನನ್ನ ಅಕ್ಕ ಹಾಗೂ ನನ್ನ ಗಂಡ ಹಾಗೂ ಚಾಸಾ-2 ರಿಂದ 6 ರವರ ವಿರುದ್ಧ ಈ ಪ್ರಕರಣದ ಆರೋಪಿ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಗಲಾಟೆ ನಡೆದಂತಹ ಆಸ್ತಿಯನ್ನು ಗಲಾಟೆ ನಡೆಯವ ಪೂರ್ವದಲ್ಲಿ ದೇವಲೆವ್ವ ಎಂಬುವವರೆಗೆ ವಹಿವಾಟು ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಮನೆಯವರೇ ಅದನ್ನು ವಹಿವಾಟು ಮಾಡುತ್ತಿದ್ದರು ಎಂದು ನನಗೆ ಗೊತ್ತಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಜಮೀನನ್ನು ವಹಿವಾಟು ಮಾಡುತ್ತಿದ್ದೆವು ಎಂದು ತೋರಿಸಲು ನಾವು ಯಾವುದೇ ದಾಖಲೆಗಳನ್ನು ಪೋಲಿಸರಿಗೆ ನೀಡಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆಯದಿದ್ದರೂ ಕೂಡ ನಾನು ಮತ್ತು ಚಾಸಾ-2 ರಿಂದ 6 ರವರು ಸೇರಿ ಒಂದು ಸುಳ್ಳು ದೂರನ್ನು ಆರೋಪಿತರ ವಿರುದ್ಧ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

3. ಘಟನಾ ಸ್ಥಳಕ್ಕೆ ಆರೋಪಿ 1, 2 , 5 ಮತ್ತು 6 ರವರು ಮೊದಲು ಬಂದಿರುತ್ತಾರೆ. ನಂತರ ಆರೋಪಿ 3, 4 ಮತ್ತು 7 ರವರು ಬಂದಿರುತ್ತಾರೆ. ಆರೋಪಿತರು ಆ ದಿನದಂದು ಒಂದು ಬಡಿಗೆಯನ್ನು ತಂದಿದ್ದರು. ಅದರಿಂದ ನಮ್ಮನ್ನು ಹೊಡೆದಿರುತ್ತಾರೆ. ಸದರಿ ವಿಚಾರವನ್ನು ನಾನು ಪೋಲಿಸರು ಬಳಿ ಹೇಳಿರುತ್ತೇನೆ. ಆರೋಪಿತರು ನನ್ನನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈಯ್ದು ಹೊಡೆದರು ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಆರುಪಿತರು ನಮ್ಮ ವಿರುದ್ದ

ದೂರನ್ನು ದಾಖಲಿಸಿದ್ದಾರೆ ಎಂಬ ದ್ವೇಷದಿಂದ ನಾವು ಈ ದೂರನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.